# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1440

ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

ವಿಷಯ: ರೇಷ್ಮೆ ಗೂಡಿನ ಮಾರುಕಟ್ಟೆಗಳ ಬಗ್ಗೆ.

ಉತ್ತರಿಸುವ ದಿನಾಂಕ: 30.12.2022

ಉತ್ತರಿಸುವವರು: ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿರುವ ರೇಷ್ಮೆ ಗೂಡಿನ ಮಾರುಕಟ್ಟೆಗಳ ಸಂಖ್ಯೆ ಎಷ್ಟು: (ವಿವರ ನೀಡುವುದು): | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳನ್ನು ರೇಷ್ಮೆ ಭಾಗೀದಾರರ ಅನುಕೂಲಕ್ಕಾಗಿ ಸ್ಥಾಪಿಸಲಾಗಿದೆ. ಒಟ್ಟು 55 ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಿದ್ದು, ಅವುಗಳಲ್ಲಿ 35 ವಾಣಿಜ್ಯ ಮಾರುಕಟ್ಟೆಗಳು, 10 ದ್ವಿತಳಿ ಬಿತ್ತನೆ ಮಾರುಕಟ್ಟೆಗಳು ಹಾಗೂ 10 ಮೈಸೂರು ತಳಿ ಬಿತ್ತನೆ ಮಾರುಕಟ್ಟೆಗಳಾಗಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ | ಸದರಿ ಮಾರುಕಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಜ್ಯದ ಎಲ್ಲಾ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ರೇಷ್ಮೆ ಭಾಗೀದಾರರಾದ ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕಾದಾರರಿಗೆ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಕಾಲಕಾಲಕ್ಕೆ ಒದಗಿಸುತ್ತಿದೆ. ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಲ್ಲಿ ಯಾವುದೇ ಕೊರತೆ ಇರುವುದಿಲ್ಲ. |
| ಇ | ಹಾಗಾದಲ್ಲಿ, ಕೊರತೆ ಇರುವ ಮೂಲಭೂತ ಸೌಕರ್ಯಗಳಾವುವು: | ರೇಷ್ಮೆ ಭಾಗೀದಾರರಿಂದ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಅವಶ್ಯಕ ಹೆಚ್ಚುವರಿ ಸೌಕರ್ಯಗಳು ಬೇಡಿಕೆ ಬಂದ ಸಂದರ್ಭಗಳಲ್ಲಿ ನಿಯಮಾನುಸಾರ ಪರಿಶೀಲಿಸಿ ತ್ವರಿತವಾಗಿ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು. |
| ಈ | ಸದರಿ ಸೌಕರ್ಯಗಳನ್ನು ಕಲ್ಪಿಸಲು ತಗಲುವ ಅಂದಾಜು ಮೊತ್ತವೆಷ್ಟು: ಈ ಸಂಬಂಧ ಕಾರ್ಯ ಯೋಜನೆ ರೂಪಿಸಲಾಗಿದೆಯೇ: | ಅವಶ್ಯಕ ಮೂಲಭೂತ ಸೌಲಭ್ಯಗಳಾದ ಶುದ್ಧ ಕುಡಿಯುವ ನೀರು, ವಿದ್ಯುತ್, ಬಾಡಿಗೆ, ಶೌಚಾಲಯ, ತೂಕ ಯಂತ್ರಗಳು, ಫ್ಯಾನ್ ಗಳು, ಜಾಲರಿ(ಬಿನ್ಸ್), ಆಸನಗಳು, ಬುಟ್ಟಿಗಳು(Crates), ಗಣಕಯಂತ್ರ, UPS, ಇ-ಹರಾಜು, ಇ-ತೂಕ, ಇ-ಪಾವತಿ, ಕಾರ್ಯಗಳಿಗೆ ಅವಶ್ಯಕ ಸಾಮಗ್ರಿಗಳು, ಸಿಸಿಟಿವಿಗಳು, ಸೋಲಾರ್ ಪವರ್, ಸಣ್ಣ ಪುಟ್ಟ ರಿಪೇರಿಗಳು, ನಾಮಫಲಕಗಳು, ಧ್ವನಿವರ್ಧಕಗಳು, ದೂರವಾಣಿ, ಪ್ರಿಂಟಿಂಗ್, ಸಾದಿಲ್ವಾರು ಅವಶ್ಯಕ ಸಾಮಗ್ರಿ ಮತ್ತು ಪೀಠೋಪಕರಣಗಳು ಪ್ರಮುಖ ಮೂಲಭೂತ ಸೌಲಭ್ಯಗಳಾಗಿರುತ್ತವೆ. ಇವುಗಳ ಖರೀದಿ ಮತ್ತು ನಿರ್ವಹಣೆಗಳಿಗೆ ಯೋಜನೆ ರೂಪಿಸಲಾಗಿದೆ.<br>ರಾಜ್ಯದ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ರೇಷ್ಮೆ ಭಾಗೀದಾರರಿಗೆ . ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2022-23ನೇ ಸಾಲಿಗೆ ರೇಷ್ಮೆ ಗೂಡು ಮಾರುಕಟ್ಟೆಗಳ ನಿರ್ವಹಣೆ ಕಾರ್ಯಕ್ರಮದ ಯೋಜನೆ ಲೆಕ್ಕಶೀರ್ಷಿಕೆ "2851-00-107-1-51(071) ಮತ್ತು "2851-00-107-1-51(059) ಹಾಗೂ "2851-00-107-1-35(059) ಯಡಿ ಒಟ್ಟು ರೂ.480.00 ಲಕ್ಷಗಳ ಅನುದಾನವನ್ನು ಮಾರುಕಟ್ಟೆವಾರು ಬೇಡಿಕೆಯನ್ನು ಪಡೆದು ವಾರ್ಷಿಕ ಕ್ರಿಯಾಯೋಜನೆ ತಯಾರಿಸಿ ಯೋಜನೆ ರೂಪಿಸಲಾಗಿರುತ್ತದೆ. |

| | | |
|---|---|---|
| ಊ | ಯಾವ ಕಾಲಮಿತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು? | 2022-23ನೇ ಸಾಲಿಗೆ ಮಾರುಕಟ್ಟೆಗಳ ನಿರ್ವಹಣೆಗಾಗಿ ಕಲ್ಪಿಸಿಕೊಂಡಿರುವ ಯೋಜನೆಯಡಿ ಒಟ್ಟು ರೂ.480.00 ಲಕ್ಷಗಳನ್ನು ನಾಲ್ಕು ಕಂತುಗಳಲ್ಲಿ ಕಲ್ಪಿಸಲಾಗುವುದು. ಪ್ರಸ್ತುತ ಒಂದು,ಮತ್ತು ಎರಡನೇ ಕಂತಿನ ಅನುದಾನವು ಬಿಡುಗಡೆಯಾಗಿರುವುದಕ್ಕೆ ವೆಚ್ಚ ಭರಿಸಲಾಗಿರುತ್ತದೆ ಮತ್ತು ಮೂರನೇ ಕಂತಿನ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತಿದೆ. |

**ಕಡತ ಸಂಖ್ಯೆ:ರೇಷ್ಮೆ 118 ರೇಸೇವಿ 2022**

**(ಡಾ.ನಾರಾಯಣಗೌಡ)**
**ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವರು**

## ರಾಜ್ಯದಲ್ಲಿರುವ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ವಿವರಗಳ ಅನುಬಂಧ-1

| ಕ್ರ.ಸಂ | ಮಾರುಕಟ್ಟೆಯ ಹೆಸರು | ತಾಲ್ಲೂಕು | ಜಿಲ್ಲೆ |
|---|---|---|---|
| ಮಿಶ್ರತಳಿ-ವಾಣಿಜ್ಯ ರೇಷ್ಮೆ ಗೂಡಿನ ಮಾರುಕಟ್ಟೆಗಳು | | | |
| 1 | ವಿಜಯಪುರ | ದೇವನಹಳ್ಳಿ | ಬೆಂಗಳೂರು ಗ್ರಾಮಾಂತರ |
| 2 | ಮುಧೋಳ | ಮುಧೋಳ | ಬಾಗಲಕೋಟೆ |
| 3 | ಇಳಕಲ್ | ಹುನಗುಂದ | |
| 4 | ಅಥಣಿ | ಅಥಣಿ | ಬೆಳಗಾವಿ |
| 5 | ಗೋಕಾಕ್ | ಗೋಕಾಕ್ | |
| 6 | ಕೂಡ್ಲಗಿ | ಕೂಡ್ಲಗಿ | ಬಳ್ಳಾರಿ |
| 7 | ಹುಮ್ನಾಬಾದ್ | ಹುಮ್ನಾಬಾದ್ | ಬೀದರ್ |
| 8 | ವಿಜಯಪುರ | ವಿಜಯಪುರ | ವಿಜಯಪುರ |
| 9 | ಚಾಮರಾಜನಗರ | ಚಾಮರಾಜನಗರ | ಚಾಮರಾಜನಗರ |
| 10 | ಸಂತೆಮರಹಳ್ಳಿ | | |
| 11 | ಹರವೆ | | |
| 12 | ಕೊಳ್ಳೇಗಾಲ | ಕೊಳ್ಳೇಗಾಲ | |
| 13 | ಹನೂರು | | |
| 14 | ಮೈಸೂರು | ಮೈಸೂರು | ಮೈಸೂರು |
| 15 | ಟಿ.ನರಸೀಪುರ | ಟಿ.ನರಸೀಪುರ | |
| 16 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 17 | ಚಿಂತಾಮಣಿ | ಚಿಂತಾಮಣಿ | |
| 18 | ಶಿಡ್ಲಘಟ್ಟ | ಶಿಡ್ಲಘಟ್ಟ | |
| 19 | ಹೆಚ್.ಕ್ರಾಸ್ | | |
| 20 | ಬಿ.ಸಿ.ರೋಡ್ | ಬಂಟ್ವಾಳ | ದಕ್ಷಿಣ ಕನ್ನಡ |
| 21 | ದಾವಣಗೆರೆ | ದಾವಣಗೆರೆ | ದಾವಣಗೆರೆ |
| 22 | ರಾಯಪುರ | ದಾರವಾಡ | ದಾರವಾಡ |
| 23 | ಶಿರಹಟ್ಟಿ | ಶಿರಹಟ್ಟಿ | ಗದಗ |
| 24 | ಕಲಬುರಗಿ | ಕಲಬುರಗಿ | ಕಲಬುರಗಿ |
| 25 | ಜೇವರ್ಗಿ | ಜೇವರ್ಗಿ | |
| 26 | ಕೋಲಾರ | ಕೋಲಾರ | ಕೋಲಾರ |
| 27 | ಕ್ಯಾಲನೂರು | | |
| 28 | ಶ್ರೀನಿವಾಸಪುರ | ಶ್ರೀನಿವಾಸಪುರ | |
| 29 | ಮುಳಬಾಗಿಲು | ಮುಳಬಾಗಿಲು | |
| 30 | ಮಳವಳ್ಳಿ | ಮಳವಳ್ಳಿ | ಮಂಡ್ಯ |
| 31 | ರಾಮನಗರ | ರಾಮನಗರ | ರಾಮನಗರ |
| 32 | ಚನ್ನಪಟ್ಟಣ | ಚನ್ನಪಟ್ಟಣ | |
| 33 | ಕನಕಪುರ | ಕನಕಪುರ | |
| 34 | ಲಿಂಗಸಗೂರು | ಲಿಂಗಸಗೂರು | ರಾಯಚೂರು |
| 35 | ಹಾವೇರಿ | ಹಾವೇರಿ | ಹಾವೇರಿ |

Scanned with OKEN Scanne

| | | | |
|---|---|---|---|
| ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು | | | |
| 1 | ಬೆಂಗಳೂರು | ಬೆಂಗಳೂರು ಉತ್ತರ | ಬೆಂಗಳೂರು ನಗರ |
| 2 | ಸರ್ಜಾಪುರ | ಆನೆಕಲ್ | |
| 3 | ಅತ್ತಿಬೆಲೆ | | |
| 4 | ಬೆಳಗಾವಿ | ಬೆಳಗಾವಿ | ಬೆಳಗಾವಿ |
| 5 | ಹಾಸನ | ಹಾಸನ | ಹಾಸನ |
| 6 | ಕುಶಾಲನಗರ | ಸೋಮವಾರಪೇಟೆ | ಕೊಡಗು |
| 7 | ಕೆ.ಆರ್.ಪೇಟೆ | ಕೆ.ಆರ್.ಪೇಟೆ | ಮಂಡ್ಯ |
| 8 | ಶಿವಮೊಗ್ಗ | ಶಿವಮೊಗ್ಗ | ಶಿವಮೊಗ್ಗ |
| 9 | ತುಮಕೂರು | ತುಮಕೂರು | ತುಮಕೂರು |
| 10 | ಶಿರಸಿ | ಶಿರಸಿ | ಉತ್ತರ ಕನ್ನಡ |
| ಮೈಸೂರು ಶುದ್ಧ ತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು | | | |
| 1 | ಮಾಗಡಿ | ಮಾಗಡಿ | ರಾಮನಗರ |
| 2 | ಕುದೂರು | | |
| 3 | ಸೋಲೂರು | | |
| 4 | ವೀರೇಗೌಡನದೊಡ್ಡಿ | | |
| 5 | ಹೆಬ್ಬೂರು | ತುಮಕೂರು | ತುಮಕೂರು |
| 6 | ಕುಣಿಗಲ್ | ಕುಣಿಗಲ್ | |
| 7 | ಸಂತೆಮಾವತ್ತೂರು | | |
| 8 | ಕೆಂಪನಹಳ್ಳಿ | | |
| 9 | ಹುಲಿಯೂರು ದುರ್ಗ | | |
| 10 | ಚೌಡನಕುಪ್ಪೆ | | |

Scanned with OKEN Scanne